ಮಾಡಿದ್ದಾರೆ. ಇದರಲ್ಲಿ ವಂತಿಗೆ ಎಷ್ಟು ವಸೂಲು ಆಗುತ್ತದೆ ಎಂಬುದನ್ನು ನೋಡಿಕೊಂಡು ನಮ್ಮ ಕೈಯಲ್ಲಿ ಎಷ್ಟು ಆಗುತ್ತದೆಯೋ ಅಷ್ಟನ್ನು ಈ ವರ್ಷ ಒದಗಿಸಿ ದುರಸ್ತಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೇ, ಈ ಹಿಂದೆ ವಿಧಾನ ಪರಿಷತ್ತಿನಲ್ಲಿ ಇದೇ ವಿಚಾರವಾಗಿ ಸನ್ಮಾನ್ಯ ಟಿ.ಎ. ರಂಗಯ್ಯನವರು ಪ್ರಸ್ತಾಪ ಮಾಡಿದ್ದಾಗ ಹಿಂದೆ ಇದ್ದಂಥ ಮಂತ್ರಿಗಳಾದ ಶ್ರೀ ರಾಜಾ ಅಮರೇಶ್ ನಾಯಕ್ರವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ಸಭೆಯನ್ನೂ ಕೂಡ ಮಾಡಿ ಅವರು ಒಂದು ಆಶ್ವಾಸನೆಯನ್ನೂ ಕೊಟ್ಟಿದ್ದರು. ಆ ಆಶ್ವಾಸನೆ ಏನಾಗಿದೆ, ಯಾವ ಹಂತದಲ್ಲಿದೆ, ಮಂತ್ರಿಗಳು ಅವ್ರೊತ್ತು ಕೆಲಸವನ್ನು ಇನ್ನೇನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದರು. ಆದ್ದರಿಂದ ಕೆಲಸ ಯಾವ ಹಂತದಲ್ಲಿದೆ ಎನ್ನುವುದು ನಮಗೆ ಬೇಕು. ಮತ್ತೆ ಇನ್ನೊಂದು ವಿಚಾರ. ನೀವು ಸರ್ಕಾರದ ವತಿಯಿಂದ ಪರಿಶೀಲನೆ ಮಾಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದೀರಿ, ಬಹುಶಃ ಇದೇ ರೀತಿ ಪರಿಶೀಲನೆ ಮಾಡುತ್ತೇವೆ ಎಂದು ಹೀಗೆ ಕೆಲವು ದಿವಸಗಳನ್ನು ಬಿಟ್ಟರೆ ಅಲ್ಲಿ ಗೋಡೆಯೆಲ್ಲಾ ಕುಸಿದು ಹೋಗಿ ಅಲ್ಲಿ ಏನೂ ಇರಲಿಲ್ಲವೇನೋ ಎನ್ನುವ ರೀತಿಯಲ್ಲಿ ಆಗುತ್ತದೆ. ಆದುದರಿಂದ ಸರ್ಕಾರ ನಿಖರವಾಗಿ ಎಷ್ಟು ದಿವಸಗಳಲ್ಲಿ ಎಷ್ಟು ಹಣವನ್ನು ನಾವು ಇದಕ್ಕಾಗಿ ಖರ್ಚು ಮಾಡುತ್ತೇವೆ ಎಂಬ ಉತ್ತರವನ್ನೂ ಮಾನ್ಯ ಕಂದಾಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈ ಹಿಂದೆ ಏನು ಆಶ್ವಾಸನೆಯನ್ನು ಕೊಟ್ಟಿದ್ದರು ಎಂಬುದು ನನಗೆ ಗೊತ್ತಿಲ್ಲ, ಸರ್ಕಾರ ಒಂದೇ ಬಾರಿಗೆ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಕಷ್ಟವಾಗುತ್ತದೆ. ಸನ್ಮಾನ್ಯ ಸದಸ್ಯರು ಈಗ ಏನು ಒಂದು ಸಮಿತಿಯಲ್ಲಿ ಇದ್ದಾರೆ, ಅವರು ಎಷ್ಟು ಬೇಗ ವಂತಿಗೆಯನ್ನು ವಸೂಲು ಮಾಡುತ್ತಾರೆ ಅಷ್ಟು ಬೇಗ ಈ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳುತ್ತೇನೆ.

ಅನುಸೂಚಿತ ಉದ್ದಿಮೆಗಳ ಸಂಖ್ಯೆ

1086 - ಶ್ರೀ ಐಯನೂರು ಮಂಜುನಾಥ (ಹೊಸನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕನಿಷ್ಠ ವೇತನ ಕಾಯ್ದೆ 1948ರ ಅಡಿಯಲ್ಲಿ ಬರುವ ಅನುಸೂಚಿತ ಉದ್ದಿಮೆಗಳು ಎಷ್ಟು?

ಆ) ಈ ಅನುಸೂಚಿತ ಉದ್ದಿಮೆಗಳಲ್ಲಿ ಅಪಾಯಕಾರಿ ಉದ್ದಿಮೆಗಳು ಎಷ್ಟು?

ಇ) ಈ ಉದ್ದಿಮೆಗಳಲ್ಲಿ ಬಾಲ ಕಾರ್ಮಿಕರ ನಿಷೇಧ ಮತ್ತು ನಿಯಂತ್ರಣ ನಿಯಮಗಳನ್ನು ಜಾರಿಗೊಳಿಸಲಾಗಿದೆಯೇ?

ಈ) ಹಾಗಾದರೆ ಕಾರ್ಮಿಕ ಕಾಯ್ದೆಗಳೊಂದಿಗೆ ಸದರಿ ನಿಯಮಗಳನ್ನು ಜಾರಿಗೊಳಿಸಲಾಗುತ್ತಿದೆಯೇ?

ಶ್ರೀ ಸಿ. ಗುರುನಾಥ್ (ಕಾರ್ಮಿಕ ಸಚಿವರು) :

ಅ) 61 (ಅರವತ್ತೊಂದು)

ಆ) 3 (ಮೂರು)

(1) ನಿರ್ಮಾಣ ಹಾಗೂ ರಸ್ತೆಗಳ ನಿರ್ವಹಣೆ ಅಥವಾ ಕಟ್ಟಡ ನಿರ್ಮಾಣ

(2) ಹೊಗೆಸೊಪ್ಪು (ಬೀಡಿ ಸುತ್ತುವುದು)

(3) ಟ್ಯಾನರೀಸ್ ಉದ್ಯಮ

ಇ) ಹೌದು

ಈ) ಹೌದು

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ 61 ಅನ್ನು ಷೆಡ್ಯೂಲ್ ಎಂಪ್ಲಾಯ್ಮೆಂಟ್ ಎಂದು ಹೇಳಿ ಗುರುತಿಸಿದ್ದೀವಿ ಎಂದು ಹೇಳಿದ್ದಾರೆ. ಅದರಲ್ಲಿ ಎಷ್ಟಕ್ಕೆ ಕನಿಷ್ಠ ವೇತನವನ್ನು ನಿಗದಿ ಮಾಡಿದ್ದೀರಿ ಎನ್ನುವುದು ಒಂದು ಪ್ರಶ್ನೆ. 1967ನೇ ಇಸವಿಯಲ್ಲಿ ಟಿಕ್ಸೈಲ್ ಇಂಡಸ್ಟ್ರೀ, ಸಿಲ್ಕ್ ನಿಗದಿ ಆದಂಥ ಕನಿಷ್ಠ ವೇತನವನ್ನು ಇದುವರೆಗೂ ಏಕೆ ಪುನರ್ ವಿಮರ್ಷೆಯನ್ನು ಮಾಡಲಿಕ್ಕೆ ಆಗಲಿಲ್ಲ ಎನ್ನುವುದು ಎರಡನೆಯ ಪ್ರಶ್ನೆ. ಮೂರನೆಯದು ಬಾಲ ಕಾರ್ಮಿಕರ ವಿಚಾರದಲ್ಲಿ ಹೊಗೆಸೊಪ್ಪು ನಿರ್ಮಾಣ ಕಾಮಗಾರಿಗಳನ್ನು ಹೆಸಾರ್ಡ್ಸ್ ಇಂಡಸ್ಟ್ರಿಗಳೆಂದು ಗುರುತಿಸಿದ್ದೀವೆ ಎಂದು ತಿಳಿಸಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ನನ್ನ ಪ್ರಶ್ನೆ ಏನೆಂದರೆ, ಕ್ವಾರಿಗಳಲ್ಲಿ ಕೆಲಸ ಮಾಡತಕ್ಕಂಥವರು, ಸಾರಾಯಿಯನ್ನು ತುಂಬತಕ್ಕಂಥ ಇಂಡಸ್ಟ್ರೀಗಳಲ್ಲಿ ಕೆಲಸ ಮಾಡತಕ್ಕಂಥ ಹೆಣ್ಣುಮಕ್ಕಳು, ಇವೆಲ್ಲಾ ಇಂಡಸ್ಟ್ರೀಗಳು ಹೆಸಾರ್ಡ್ಸ್ ಇಂಡಸ್ಟ್ರೀಗಳು ಅಲ್ಲವೇ? ಮ್ಯಾಂಗನೀಸ್ ಇಂಡಸ್ಟ್ರೀಗಳನ್ನು ಅಂದರೆ ಮ್ಯಾಂಗನೀಸನ್ನು ಬಳಸತಕ್ಕಂಥ ಕೈಗಾರಿಕೆಗಳಲ್ಲಿ ಕೆಲಸ ಮಾಡತಕ್ಕಂಥ ಮಕ್ಕಳ ಪಾಲಿಗೆ ಇವೆಲ್ಲಾ ಹೆಸಾರ್ಡ್ಸ್ ಆಗುವುದಿಲ್ಲವೇ ಪ್ರಶ್ನೆಯನ್ನು ತಮಗೆ ಕೇಳುತ್ತಿದ್ದೇನೆ.

ಶ್ರೀ ಸಿ. ಗುರುನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ ಎಂದರೆ ಷೆಡ್ಯೂಲ್ಡ್ ಇಂಡಸ್ಟ್ರೀಸ್ನಲ್ಲಿ ಕೆಲವು ಕನಿಷ್ಠ ವೇತನದ ಬಗ್ಗೆ ನಮ್ಮ ಕರಡು ಪತ್ರಿಕೆ ಹೊರಡಿಸಿದ್ದೇವೆ. ಅದರಲ್ಲಿ ಟಿಕ್ಸೈಲ್ ಇಂಡಸ್ಟ್ರೀಸ್ ಇರಬಹುದು. ಅವರು ಕೇಳತಕ್ಕ ಮಾಹಿತಿಯನ್ನು ನಾನು ವಿಸ್ತಾರವಾಗಿ ಅನಂತರ ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ಎರಡನೆಯದಾಗಿ, ಬಾಲಕಾರ್ಮಿಕರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪಿಸಿದ್ದಾರೆ. ಬಾಲ ಕಾರ್ಮಿಕರನ್ನು ಕೆಲವೊಂದು ಅಪಾಯಕಾರಿ ಕಾರ್ಖಾನೆಗಳಲ್ಲಿ ಆಗಲಿ ಗಣಿಗಳಲ್ಲಾಗಲಿ ಕೆಲಸಕ್ಕೆ ತೆಗೆದುಕೊಳ್ಳಬಾರದೆಂಬ ಕಾಯಿದೆ ಇದೆ. ಅದರ ಪ್ರಕಾರ ಎಲ್ಲೂ ಕೂಡ ಬಾಲ ಕಾರ್ಮಿಕರನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಿಲ್ಲ. ಒಂದು ವೇಳೆ ಯಾವುದಾದರೂ ಕಾರ್ಖಾನೆಯಲ್ಲಾಗಲಿ, ಗಣಿಯಲ್ಲಾಗಲಿ ಬಾಲಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಂಡಿರುವ ನಿದರ್ಶನಗಳಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಅಂಥಾದ್ದನ್ನು ಈ ಕಾಯಿದೆಯ ಅಡಿಯಲ್ಲಿ ನಿಷೇಧ ಮಾಡೋಣವೆಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ಆಯನೂರು ಮಂಜುನಾಥ್ : ಮಾನ್ಯ ಅಧ್ಯಕ್ಷರೆ, 61 ಷೆಡ್ಯೂಲ್ ಎಂಪ್ಲಾಯ್ಮೆಂಟ್ಗಳಲ್ಲಿ ಎಷ್ಟಕ್ಕೆ ತಾವು ಕನಿಷ್ಠ ವೇತನವನ್ನು ನಿಗದಿಮಾಡಿದ್ದೀರಿ? ಇನ್ನುಳಿದವುಗಳಿಗೆ ಇನ್ನೂ ಏತಕ್ಕೆ ನಿಗದಿ ಮಾಡಿಲ್ಲ? ನನ್ನ ಮಾಹಿತಿಯ ಪ್ರಕಾರ ಇಡೀ ರಾಜ್ಯದಲ್ಲಿ 55 ಸಾವಿರ ಹೋಟೆಲ್ಗಳಿವೆ. ಅಲ್ಲಿ ಸುಮಾರು 16 ರಿಂದ 18 ಗಂಟೆಗಳವರೆಗೂ ಮಕ್ಕಳು ಕೆಲಸ ಮಾಡುತ್ತವೆ. ಅವರ ರಕ್ಷಣೆಗಾಗಿ ತಾವು ಏನೇನು ಕ್ರಮಗಳನ್ನು ಕೈಗೊಳ್ಳುತ್ತಿದ್ದೀರಿ? ನಾವು ಯಾವಾಗ ಹೋಗಿ ನೋಡಿದರೂ ಆ ಮಕ್ಕಳು ಕೆಲಸ ಮಾಡುತ್ತಲೇ ಇರುತ್ತವೆ. ಇದೊಂದು ಸಾಮಾಜಿಕ ಸಮಸ್ಯೆ ಎಂಬುದನ್ನು ಒಪ್ಪಿ ತಮಗೆ ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ತಾವು ಚೈಲ್ಡ್ ಲೇಬರ್ ಅಬಾಲಿಷ್ ಆಕ್ಟನ್ನು ಜಾರಿಗೆ ತಂದಮೇಲೆ ಅದಕ್ಕೆ ಪರಿಹಾರವಾಗಿ ಯಾವ ಯಾವ ಯೋಜನೆಗಳನ್ನು ಸರ್ಕಾರ ಕೈಗೊಂಡಿದೆ ಮತ್ತು ಜಾರಿ ಮಾಡಿದೆ?

ಶ್ರೀ ಸಿ. ಗುರುನಾಥ್ : ಈಗಾಗಲೇ ಮಾನ್ಯ ಸದಸ್ಯರು ಕೇಳಿದಂಥ ಷೆಡ್ಯೂಲ್ಡ್ ಇಂಡಸ್ಟ್ರೀಯಲ್ಲಿ ಕನಿಷ್ಠ ವೇತನ ಕಾಯಿದೆಯ ಅಡಿಯಲ್ಲಿ ಕನಿಷ್ಠ ವೇತನ ಸಲಹಾ ಮಂಡಲಿಯ ಸಲಹೆಯನ್ನು ತೆಗೆದುಕೊಳ್ಳುವಂಥ ನಿರ್ಧಾರವನ್ನು ಸರ್ಕಾರ ಇನ್ನೂ ತೆಗೆದುಕೊಂಡಿಲ್ಲ. ಕನಿಷ್ಠ ವೇತನ ಸಲಹಾ ಮಂಡಲಿ ರಚನೆಯಾದನಂತರ ಈ

ಪ್ರಸ್ತಾವನೆ ಮಾಡಿರತಕ್ಕಂಥ ಎಲ್ಲಾ ಷೆಡ್ಯೂಲ್ಡ್ ಇಂಡಸ್ಟ್ರೀಸ್ ಅಡಿಯಲ್ಲಿ ಬರತಕ್ಕ ಎಲ್ಲಾ ಡಿಸಿಗ್ನೇಟೆಡ್ ವರ್ಕ್ಸ್‌ನ್ ಏನಿದ್ದಾರೆ ಅದರ ಬಗ್ಗೆ ಹೇಳುತ್ತಿದ್ದೇನೆ. ಅಂದಾಜು 37ಕ್ಕೆ ಆಗಿರಬಹುದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1995ನೇ ಸೆಪ್ಟೆಂಬರ್ 7ರಂದು 17ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 61 ಪ್ರಶ್ನೆಗಳ ಪೈಕಿ 38 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿರುವ ಗ್ರಾಮ ಸಹಾಯಕರು

1958 - ಶ್ರೀ ಅಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಗ್ರಾಮಸಹಾಯಕರುಗಳ ಸಂಖ್ಯೆ ಎಷ್ಟು?

ಆ) ಗ್ರಾಮ ಸಹಾಯಕರು ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ, ಅವರಿಗೆ ನಿಗಧಿ ಮಾಡಲಾಗಿರುವ ವೇತನ ಎಷ್ಟು? ಅವರ ವೇತನ ಶ್ರೇಣಿ ಎಷ್ಟು?

ಇ) ಇವರಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪಾಗೂ ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಗ್ರಾಮ ಸಹಾಯಕರು ಎಷ್ಟಿದ್ದಾರೆ?

ಈ) ಇವರ ಸೇವೆಯನ್ನು ಕುರಿತಂತೆ ಪರಿಶೀಲಿಸಲು 11.10.94ರಂದು ಸರ್ಕಾರ ಸಮಿತಿಯನ್ನು ರಚಿಸಿರುವುದು ನಿಜವೇ? ಸಮಿತಿ ವರದಿಯ ಸಾರಾಂಶವೇನು?

ಉ) ವರದಿಯ ಆಧಾರದ ಮೇಲೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) :

ಅ) 10450

ಆ) 1978 ರಿಂದ ನಿಗದಿತ ಸಂಭಾವನೆ ಮಾಸಿಕ ರೂ. 800.00 ರಂತೆ ನೀಡಲಾಗುತ್ತಿದೆ.

ಇ) 90 ಭಾಗ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಕ್ಕೆ ಸೇರಿದವರು, ಉಳಿದವರು ಹಿಂದುಳಿದ ವರ್ಗಕ್ಕೆ ಸೇರಿದವರಾಗಿರುತ್ತಾರೆ.

ಈ) ನಿಜ. ಯಥಾಸ್ಥಿತಿಯಲ್ಲಿ ಮುಂದುವರಿಯುವಂತೆ ತೀರ್ಮಾನಿಸಲಾಗಿದೆ.

ಉ) ಈ ವಿಷಯದ ಬಗ್ಗೆ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 29424:94 ಬಾಕಿ ಇರುವುದರಿಂದ ರಿಟ್ ಅರ್ಜಿಯ ಇತ್ಯರ್ಥವಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಅಂಗವಿಕಲ ನಿರುದ್ಯೋಗಿಗಳ ಕುರಿತು

2089 - ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಅಂಗವಿಕಲ ನಿರುದ್ಯೋಗಿಗಳು ದಾಖಲಿಸಿಕೊಂಡಿದ್ದವರ ಸಂಖ್ಯೆ ಎಷ್ಟು?